ಶ್ರೀ ಹೆಚ್. ಏಕಾಂತಯ್ಯ (ಸಹಕಾರ ಮಂತ್ರಿಗಳು).—

ಅ) ೧೩೮೨ ಪ್ರಕರಣಗಳು.

ಆ) ೧. ೧೯೮೫–೮೬ನೇ ಸಾಲಿಗೆ ರೂ. ೫೦ ೪೦೫–೦೦

೨. ೧೯೮೬–೮೭ (ಡಿಸೆಂಬರ್ ೧೯೮೬ರ ಅಂತ್ಯದವರೆಗೆ) ರೂ. ೪೩,೬೯೫–೦೦

ಒಟ್ಟು ರೂ. ೯೪,೧೦೦–೦೦

ಯಾವ ಮೊತ್ತವು ಬಾಕಿ ಇರುವುದಿಲ್ಲ.

ಶ್ರೀ ಬಿ. ಎಂ. ಇದಿನಬ್ಬ.—ಅಧ್ಯಕ್ಷರೇ, ೧೩೮೨ ಪ್ರಕರಣಗಳಲ್ಲಿ ಬರೀ ೯೪,೧೦೦ ರೂಪಾಯಿಗಳನ್ನು ವಸೂಲಾಗಿದೆ ಎಂದು ಹೇಳಿದ್ದಾರೆ. ಆದರೆ ಕೆಲವು ಮೊಕದ್ದಮೆಗಳನ್ನು ಮನ್ನಾ ಏನಾದರೂ ಮಾಡಿರಂವರೇನೋ ಎಂಬ ಸಂಶಯ ಬರುತ್ತದೆ. ಇಷ್ಟು ಕಡಿಮೆ ಹಣ ಆಗಲಿಕ್ಕೆ ಕಾರಣ ಇಲ್ಲವೆನಿಸುತ್ತದೆ.

ಶ್ರೀ ಹೆಚ್. ಏಕಾಂತಯ್ಯ.—ಯಾವ ಮೊಕದ್ದಮೆಯೂ ಮನ್ನಾ ಆಗಿಲ್ಲ. ೮೫–೮೬ನೇ ಸಾಲಿನಲ್ಲಿ ಒಟ್ಟು ೮೦೨ ಪ್ರಕರಣಗಳಲ್ಲಿ ೭೬೫ ಪ್ರಕರಣಗಳು ರಾಜಿಯಾಗಿವೆ. ಆ ಬಾಬ್ತು ೪೮,೬೪೫ ರೂ. ಬಂದಿದೆ. ಇನ್ನುಳಿದ ೧೭೨೫ ರೂಪಾಯಿಗಳನ್ನು ಕೋರ್ಟಿನಲ್ಲಿ ದಂಡದ ರೂಪದಲ್ಲಿ ಪಾವತಿ ಮಾಡಲಾಗಿದೆ. ೮೬–೮೭ ರಲ್ಲಿ ಇದ್ದ ೫೮೦ ಕೇಸ್‌ಗಳ ಪೈಕಿ ೫೨೦ ಪ್ರಕರಣಗಳಲ್ಲಿ ೩೪,೬೧೨ ರೂಪಾಯಿಗಳು ವಸೂಲಾಗಿದೆ.

ಶ್ರೀ ಬಿ. ಎಂ. ಇದಿನಬ್ಬ.—ತೂಕ ಮತ್ತು ಅಳತೆ ಪ್ರಕರಣಗಳ ಸರ್ವೆ ರೀತಿ ಚುರುಕು ಸಾಲಲಿಲ್ಲ ಎಂದೆನಿಸುತ್ತದೆ. ಇನ್ನೂ ಪರಿಣಾಮಕಾರಿಯಾಗಿ ಬೃಹತ್ ಪ್ರಮಾಣದಲ್ಲಿ ಮಾಡಬೇಕಾಗಿದೆ.

ಶ್ರೀ ಹೆಚ್. ಏಕಾಂತಯ್ಯ.—ಮಾನ್ಯ ಸದಸ್ಯರ ಸಲಹೆಯನ್ನು ಪರಿಶೀಲಿಸುತ್ತೇನೆ.

ಅಧ್ಯಕ್ಷರು.—ಶ್ರಿ ಗೋಪಾಲಮುಕುಂದ ಕನಡೆ ಪ್ರಶ್ನೆ – ಸದಸ್ಯರ ಗೈರುಹಾಜರಿ

ಗ್ರಾಮಲೆಕ್ಕಿಗರ ಖಾಲಿ ಇರುವ ಹುದ್ದೆಗಳು

೧೩೧೧. ಶ್ರೀ ಆರ್. ಎನ್. ನಾಯಕ್, (ಭಟ್ಕಳ).—ಮಾನ್ಯ ಕಂದಾಯ ಯೋಜನಾ ಹಾಗೂ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಖಾಲಿಯಿರುವ ಗ್ರಾಮಲೆಕ್ಕಿಗರ ಹುದ್ದೆಗಳೆಷ್ಟು ?
(ಜಿಲ್ಲಾವಾರು ವಿವರ ನೀಡುವುದು)

ಆ) ಈ ಹುದ್ದೆಗಳು ಖಾಲಿಯಿರಲು ಕಾರಣಗಳೇನು ಮತ್ತು ಭರ್ತಿ ಮಾಡಲು ಸರ್ಕಾರವು ಕೈಗೊಂಡ ಕ್ರಮಗಳೇನು ?

ಇ) ಯಾವಾಗ ಈ ಹುದ್ದೆಗಳನ್ನು ಭರ್ತಿ ಮಾಡಲಾಗುವುದು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ಯೋಜನಾ ಹಾಗು ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು).—

ಅ) ರಾಜ್ಯದಲ್ಲಿ ಒಟ್ಟು ೧೫೮೮ ಗ್ರಾಮಲೆಕ್ಕಿಗರ ಹುದ್ದೆಗಳು ಖಾಲಿಯಿದ್ದರೂ ಇತ್ತೀಚಿನ ಸರ್ಕಾರಿ ಆದೇಶ ಕ್ರಮಾಂಕ. ಆರ್‌ಡಿ ೧೯೦ ಬಿಎನ್‌ಸಿ ೮೭. ದಿನಾಂಕ ೨–೪–೧೯೮೭ರಲ್ಲಿ ಮಂಡಲ ಪಂಚಾಯಿತಿಗಳ ರಚನೆಯ ತತ್ಪರಿಣಾಮವಾಗಿ ಕಂದಾಯ ವೃತ್ತಗಳನ್ನು ವಿಸ್ತರಿಸಿ ಸುಮಾರು ೨೧೦೦ ಗ್ರಾಮಲೆಕ್ಕಿಗರ ಹುದ್ದೆಗಳನ್ನು ಕಡಿಮೆಗೊಳಿಸಲಾಗಿದೆ. ಆದ್ದರಿಂದ ಒಟ್ಟು ಗ್ರಾಮಲೆಕ್ಕಿಗರ ಹುದ್ದೆಗಳ ಸಂಖ್ಯೆಯಲ್ಲಿ ಖಾಲಿಯಿರುವ ಹುದ್ದೆಗಳು ಕಡಿಮೆ ಪ್ರಮಾಣದಲ್ಲಿರುವುದರಿಂದ ೫೪೦ ಹೆಚ್ಚುವರಿ ಹುದ್ದೆ.

ಗಳನ್ನಾಗಿ ಪರಿಗಣಿಸಬೇಕಾಗಿದೆ. ತತ್ಪರಿಣಾಮವಾಗಿ ಪ್ರಸ್ತುತ ಸನ್ನಿವೇಶದಲ್ಲಿ ಗಾವಲಿಕ್ಕಿಗರ ಹುದ್ದೆಗಳು ಖಾಲಿಯಿರುವುದಿಲ್ಲ.

ಆ) ಇ) ಉದ್ಭವಿಸುವುದಿಲ್ಲ.

ಶ್ರೀ ಆರ್.ಎನ್. ನಾಯಕ್.—ಮಾನ್ಯ ಅಧ್ಯಕ್ಷರೇ, ೧೫೮೮ ಗ್ರಾಮ ಲೆಕ್ಕಿಗರ ಹುದ್ದೆ ಖಾಲಿ ಇದ್ದರೂ ಸಹಾ ಇವರು ಒಂದು ಆರ್ಡರನ್ನು ಹೊರಡಿಸಿ ಅಷ್ಟು ಹುದ್ದೆಗಳು ಖಾಲಿ ಇಲ್ಲ. ೫೪೦ ಹುದ್ದೆಗಳೇ ಜಾಸ್ತಿಯಾಗಿದೆ ಎಂದು ಬರೆದಿದ್ದಾರೆ. ನನ್ನ ಲೆಕ್ಕಾಚಾರದಲ್ಲಿ ಈ ರೀತಿಯಾಗಿರುವುದರಿಂದ ರೆವಿನ್ಯೂ ವಿಲೇಜ್‌ಗಳಲ್ಲಿ ಕೆಲಸ ಸ್ಥಗಿತಗೊಂಡಿದೆಯೇ? ಸಾಮಾನ್ಯವಾಗಿ ಗ್ರಾಮ ಲೆಕ್ಕಿಗರ ಕೆಲಸ ಬಹಳ ಇರುತ್ತದೆ, ಈ ರೀತಿಯಾಗಿರುವುದರಿಂದ ಅದು ಸ್ಥಗಿತಗೊಂಡಿದೆಯೇ? ಎರಡನೆಯದು ಇಷ್ಟು ದೊಡ್ಡ ಸಂಖ್ಯೆಯಲ್ಲಿ ಗ್ರಾಮ ಲೆಕ್ಕಿಗರು ಈ ರಾಜ್ಯದಲ್ಲಿ ಇಲ್ಲದೇ ಇರುವುದರಿಂದ ಬೇರೆಯವರಿಗೆ ಏನೇನು ಕೆಲಸಗಳನ್ನು ಕೊಟ್ಟಿದ್ದೀರಿ. ಅವರುಗಳಿಗೆ ದಿವಸ ದಿವಸ ಹೋದ ಹಾಗೆ ಸಿಕ್ಕಾಪಟ್ಟೆ ಕೆಲಸವನ್ನು ಕೊಡುತ್ತಿದ್ದೀರಿ, ಆ ಕೆಲಸಗಳನ್ನು ಮಾಡುವುದಕ್ಕೆ ಬಹಳ ಕಷ್ಟವಾಗುತ್ತದೆ ಬೇರೆ ಜನರಿಗೂ ಕೂಡಾ ಇದರಿಂದ ಬಹಳ ತೊಂದರೆಯಾಗುತ್ತಿದೆ. ಈ ರೀತಿಯಾಗಿ ಗ್ರಾಮ ಲೆಕ್ಕಿಗರು ಇಲ್ಲದೇ ಇರುವುದರಿಂದ ರಾಜ್ಯದಲ್ಲಿ ಎಷ್ಟೋ ಆಗಬೇಕಾದ ಅಭಿವೃದ್ಧಿ ಕೆಲಸಗಳು ಆಗದೇ ನಿಂತು ಹೋಗಿವೆ. ನೀವು ಒಂದು ಪ್ರಣಾಳಿಕೆಯನ್ನು ಮಾಡಿ ಮನೆಗೊಂದು ಉದ್ಯೋಗವನ್ನು ಕೊಡುತ್ತೇವೆಂದು ಹೇಳಿದಿರಿ. ಈ ರೀತಿ ೧೯೮೫ರಲ್ಲಿ ಪೇಳಿದವರು ತಮ್ಮ ಸರ್ಕಾರಿ ಆದೇಶದಲ್ಲಿ ದಿನಾಂಕ ೨೬-೪-೧೯೮೮ರಲ್ಲಿ ಒಂದು ಆರ್ಡ್ಡಿಯನ್ನು ಹೊರಡಿಸಿ ೧೫೮೮ ಹುದ್ದೆಗಳು ಖಾಲಿ ಇಲ್ಲ, ೫೪೦ ಹುದ್ದೆಗಳೇ ಜಾಸ್ತಿಯಾಗಿದೆ ಎಂದು ಬರೆದಿದ್ದೀರಿ. ಈ ರೀತಿ ಆದರೆ ಮನೆಗೊಂದು ಉದ್ಯೋಗವನ್ನು ರಾಜ್ಯದಲ್ಲಿ ಎಲ್ಲಿ ಕೊಟ್ಟ ಹಾಗೆ ಆಗಿದೆ? ಇದಕ್ಕೆ ಉತ್ತರವನ್ನು ನಾನು ಕೇಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ನಾಯಕ್‌ರವರು ಸುದೀರ್ಘವಾದ ಭಾಷಣವನ್ನೇ ಮಾಡಿಬಿಟ್ಟಿದ್ದಾರೆ, ಅದು ಹಾಗಲ್ಲ. ಬಾಂಬೆ ಕರ್ನಾಟಕದಲ್ಲಿ ಪಂಚಾಯಿತಿಗಳಿಗೆ ಇನ್‌ಡಿಪೆಂಡೆಂಟ್ ಆದಂಥ ಸೆಕ್ರೆಟರಿಗಳು ಇದ್ದರು. ಈಗ ಮಂಡಲ ಪಂಚಾಯಿತಿಗಳಿಗೆ ಬೇರೆ ಸೆಕ್ರೆಟರಿಗಳು ಬಂದಿರುವುದರಿಂದ ಈ ಗ್ರಾಮ ಲೆಕ್ಕಿಗರ ಕೆಲಸ ಕಡಿಮೆಯಾಗಿದೆ. ಅವರಿಗೆ ಈಗ ಗ್ರಾಮಗಳನ್ನು ಹೆಚ್ಚಿಗೆ ಕೊಟ್ಟಿದ್ದೇವೆ. ಮೊದಲು ಆರು ಗ್ರಾಮಗಳನ್ನು ಕೊಟ್ಟಿದ್ದೆವು, ಈಗ ಎಂಟು ಗ್ರಾಮಗಳನ್ನು ಕೊಟ್ಟಿದ್ದೇವೆ ಮಂಡಲ ಪಂಚಾಯಿತಿಗಳಿಗೆ ಬೇರೆಯವರು ಬಂದಿದ್ದಾರೆ. ಗ್ರಾಮ ಲೆಕ್ಕಿಗರ ಕೆಲಸ ಕಡಿಮೆಯಾಗಿದೆ ಎಂದು ತಿಳಿದುಕೊಂಡು ಅದಕ್ಕಾಗಿ ಅವರಿಗೆ ಹೆಚ್ಚಿಗೆ ಹಳ್ಳಿಗಳನ್ನು ಕೊಟ್ಟಿದ್ದೇವೆ, ಕೆಲಸ ಎಲ್ಲೂ ನಿಂತಲ್ಲ. ಇವೊತ್ತು ಮಂಡಲ ಪಂಚಾಯಿತಿಗಳಿಗೂ ಅನೇಕ ಕೆಲಸಗಳನ್ನು ಕೊಟ್ಟಿದ್ದೇವೆ. ಮನೆಗೊಂದು ಉದ್ಯೋಗದ ಬಗ್ಗೆ ಏನು ಹೇಳಿದ್ದಾರೆ, ಕೆಲಸ ಕೊಡಬೇಕು ಅದು ಬೇರೆ ವಿಚಾರ. ಅಲ್ಲಿ ಅನಾವಶ್ಯಕವಾಗಿ ಎಂಟು ಕೋಟಿ ರೂಪಾಯಿಗಳ ಹಣವನ್ನು ವಿಚ್ರ್ಯು ಮಾಡಬೇಕಾಗಿತ್ತು, ಅದನ್ನು ಉಳಿತಾಯ ಮಾಡುತ್ತೇವೆ. ಎಲ್ಲೆಲ್ಲಿ ಅವಶ್ಯಕತೆ ಇದೆ, ಅಲ್ಲೆಲ್ಲಾ ತುಂಬುತ್ತೇವೆ. ಮೊದಲು ವಿಲೇಜ್ ಅಕೌಂಟೆಂಟ್‌ಗಳೇ ಸೆಕ್ರೆಟರಿಗಳಾಗಿದ್ದರು. ಮಾನ್ಯ ಸದಸ್ಯರು ಹೇಳಿದ ಹಾಗೆ ಅಂಥ ತೊಂದರೆ ಏನೂ ಇಲ್ಲ. ಎಲ್ಲಿ ಅವಶ್ಯಕತೆ ಬೀಳುತ್ತದೆ, ಅಲ್ಲೆಲ್ಲಾ ಹುದ್ದೆಗಳನ್ನು ತುಂಬುತ್ತೇವೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ಮಂಡಲ ಪಂಚಾಯಿತಿಗಳಿಗೆ ಗ್ರಾಮ ಲೆಕ್ಕಿಗರನ್ನು ನೇಮಕ ಮಾಡಿದ್ದೇವೆ, ಮತ್ತೆ..... ...

ಶ್ರೀ ಎಸ್. ಆರ್. ಬೊಮ್ಮಾಯಿ.—ಪಂಚಾಯಿ ಕೆಲಸಗಳನ್ನೂ ವಿಲೇಜ್ ಅಕೌಂಟೆಂಟ್ ಮಾಡುತ್ತಿದ್ದರು, ಈಗ ಅಲ್ಲಿಗೆ ಬೇರೆ ಸೆಕ್ರೆಟರಿಗಳು ಬಂದುಬಿಟ್ಟಿದ್ದಾರೆ.

ಶ್ರೀ ಬಿ. ಬಸವಲಿಂಗಪ್ಪ.—ಅಲ್ಲಿಗೆ ಬೇರೆಯವರು ಬಂದಿದ್ದಾರೆ ಎಂದು ಹೇಳುತ್ತೀರಿ. ಗ್ರಾಮ ಲೆಕ್ಕಾಧಿಕಾರಿಯ ನೇಮಕಾತಿ ಆಗಿದ್ದರೆ ಈ ರೆವಿನ್ಯೂ ಇಲಾಖೆಯ ಕೆಲಸ ಕಾರ್ಯಗಳನ್ನು ಮಂಡಲ ಪಂಚಾಯಿತಿಯ ಲೆಕ್ಕಾಧಿಕಾರಿಗೆ ವಹಿಸಿದ್ದೀರಿ. ಅವರಿಗೆ ವಹಿಸಿದರೆ ಏನು? ವಹಿಸದೇ ಹೋದರೆ ಏನು?

ಶ್ರೀ ಎಸ್.ಆರ್. ಬೊಮ್ಮಾಯಿ.—ರೆವಿನ್ಯೂ ಕೆಲಸವನ್ನು ಮಂಡಲ ಪಂಚಾಯಿತಿಗೆ ವಹಿಸಿಲ್ಲ. ಈಗ ಇರುವ ಗ್ರಾಮ ಲೆಕ್ಕಿಗರಿಗೆ ಕೆಲಸ ಕಡಿಮೆಯಾಗಿರುವುದರಿಂದ ಅವರಿಗೆ ಹೆಚ್ಚು ಹೆಚ್ಚು ಹಳ್ಳಿಗಳನ್ನು ಕೊಟ್ಟಿದ್ದೇವೆ. ಕೆಲಸ ಏನೂ ನಿಂತಿಲ್ಲ. ಅವಶ್ಯಕತೆ ಬಿದ್ದರೆ ನಾವು ಆಲೋಚನೆ ಮಾಡುತ್ತೇವೆ.

ಶ್ರೀ ಆರ್. ಎನ್. ನಾಯಕ್.—ನನ್ನ ತಿಳಿವಳಿಕೆಯ ಪ್ರಕಾರ ನಮ್ಮ ಉತ್ತರಕನ್ನಡ ಜಿಲ್ಲೆಯಲ್ಲಿ ಒಬ್ಬ ವಿಲೇಜ್ ಆಕೌಂಟೆಂಟ್ ಳಿಗೆ ಜನ ವಿಲೇಜ್ ಆಕಾಂಟೆಂಟ್ಸ್ ಮಾಡಬೇಕಾದ ಕೆಲಸವನ್ನು ಮಾಡ ಬೇಕಾಗಿ ಬಂದಿದೆ. ಐಆರ್‌ಡಿಪಿ, ವಗೈರೆ ಪ್ರತಿಯೊಂದು ಕೆಲಸಕ್ಕೂ ಸಹ ಇವರನ್ನೇ ಹಿಡಿಯಬೇಕಾಗು ತ್ತದೆ. ಇದರಿಂದ ಹಳ್ಳಿಯ ಜನರಿಗೆ ಬಹಳ ಕಷ್ಟವಾಗುತ್ತಿದೆ. ಈಗ ನಿಮ್ಮ ಹತ್ತಿರವಿರುವ ದಾಖಲೆ ಗಳ ಪ್ರಕಾರ ನಮ್ಮ ಉತ್ತರ ಕನ್ನಡ ಜಿಲ್ಲೆಗೆ ಈಗಿನ ಹೊಸ ಆದೇಶದ ಪ್ರಕಾರ ಎಷ್ಟು ಜನ ಗ್ರಾಮ ಲೆಕ್ಕಿಗರು ಬೇಕಾಗುತ್ತಾರೆ ಮತ್ತು ಯಾವಾಗ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುತ್ತೀರಿ ಎಂಬುದನ್ನು ತಾವು ನನಗೆ ತಿಳಿಸಬೇಕು? ನಾನು ಈ ಬಗ್ಗೆ ಜಿಲ್ಲಾವಾರು ವಿವರಗಳನ್ನು ಕೇಳಿದ್ದೆ. ಆದರೆ ನೀವು ಆ ವಿವರಗಳನ್ನು ಕೊಟ್ಟಿಲ್ಲದಿರುವ ಕಾರಣ ಈಗ ಅಲ್ಲಿ ಎಷ್ಟು ಜನ ಕೆಲಸ ಮಾಡುತ್ತಿದ್ದಾರೆ ಮತ್ತು ಎಷ್ಟು ಹುದ್ದೆಗಳು ಖಾಲಿ ಇವೆ ಎಂಬುದನ್ನು ತಿಳಿಸಬೇಕು?

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಈಗಾಗಲೇ ಹೇಳಿದ ಪ್ರಕಾರ ಈ ಗ್ರಾಮ ಲೆಕ್ಕಿಗರ ಕೆಲಸ ಕಡಿಮೆ ಆಗಿದೆ. ಐಆರ್‌ಡಿಪಿ ಕೆಲಸವನ್ನು ಮಂಡಲ ಪಂಚಾಯತಿ ಸೆಕ್ರೆಟರಿ ಅವರೇ ನೋಡಿಕೊಳ್ಳ ಬೇಕಾದ ಕಾರಣ ಇವರ ಕೆಲಸ ಕಡಿಮೆ ಆಗಿದೆ. ಅದು ಏನೇ ಇರಲಿ ನಾನು ಈಗಾಗಲೇ ಹೇಳಿದ ಪ್ರಕಾರ ಕಾಲ್ಸು ಜಿಲ್ಲೆಗಳಲ್ಲಿ ಇವರುಗಳ ಅವಶ್ಯಕತೆ ಎಷ್ಟಿದೆ ಎಂಬುದನ್ನು ನೋಡಿಕೊಂಡು, ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳುತ್ತೇನೆ.

ಶ್ರೀ ಆರ್. ಎನ್. ನಾಯಕ್.—ಈಗ ಗ್ರಾಮ ಲೆಕ್ಕಿಗರ ಕೆಲಸ ಕಡಿಮೆ ಆಗಿದೆ ಎಂದರೆ ಒಂದು ತಪ್ಪು ಅಭಿಪ್ರಾಯ ಎಲ್ಲರಲ್ಲಿಯೂ ಬಂದಿರುವುದು ಸರಿಯಲ್ಲ. ರೈತರಿಗೆ ಬೇಕಾದ ಯಾವುದೇ ಸರ್ಟಿ ಫಿಕೇಟನ್ನು ಈ ಗ್ರಾಮ ಲೆಕ್ಕಿಗರೇ ಕೊಡಬೇಕೇ ಹೊರತು ಅದನ್ನು ಮಂಡಲ ಪಂಚಾಯತಿ ಸೆಕ್ರೆಟರಿ ಅವರು ಕೊಡುವುದಕ್ಕಾಗುವುದಿಲ್ಲ ಸಾಲದ ಸರ್ಟಿಫಿಕೇಟ್, ಉತ್ಪನ್ನದ ಸರ್ಟಿಫಿಕೇಟ್ ಹೀಗೆ ಎಲ್ಲಾ ಸರ್ಟಿಫಿಕೇಟ್‌ಗಳನ್ನು ಇವರೇ ಕೊಡಬೇಕಾದ ಕಾರಣ ಇವರ ಕೆಲಸ ಜಾಸ್ತಿ ಆಗಿದೆ. ಈಗಿನ ನಿಮ್ಮ ಹೊಸ ಆದೇಶದ ಪ್ರಕಾರ ನಮ್ಮ ಉತ್ತರ ಕನ್ನಡ ಜಿಲ್ಲೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಅಭ್ಯರ್ಥಿಗಳಿಂದ ಅರ್ಜಿಗಳನ್ನು ಪಡೆದುಕೊಂಡಿದ್ದೀರಿ. ಆದರೆ ಅವುಗಳನ್ನು ಪರಿಶೀಲನೆ ಮಾಡಿ ಹುದ್ದೆಗಳನ್ನು ಭರ್ತಿ ಮಾಡುವ ಕೆಲಸವನ್ನು ಏತಕ್ಕೆ ನಿಲ್ಲಿಸಿದ್ದೀರಿ?

ಶ್ರೀ ಎಸ್ ಆರ್. ಬೊಮ್ಮಾಯಿ.—ಈ ಮೊದಲು ಮುಂಬೈ ಕರ್ನಾಟಕದಲ್ಲಿದ್ದ ಪಂಚಾಯತಿ ಗಳಲ್ಲಿ ಇಂಡಿಪೆಂಡೆಂಟ್ ಸೆಕ್ರೆಟರಿಗಳಿದ್ದರು. ಈಗ ಮಂಡಲ ಪಂಚಾಯತಿಗಳು ರಚನೆ ಆಗಿರುವುದರಿಂದ ಇವರ ಕೆಲಸ ಕಡಿಮೆ ಆಗಿದೆ ಆದರೂ ಈ ನಾಲ್ಕು ಜಿಲ್ಲೆಗಳಲ್ಲಿ ಖಾಲಿ ಹುದ್ದೆಗಳಿಗೆ ಗ್ರಾಮಲೆಕ್ಕಿಗರನ್ನು ನೇಮಕ ಮಾಡಲು ಅರ್ಜಿಗಳನ್ನು ಕರೆದಿದ್ದೇವೆ. ಈ ಹುದ್ದೆಗಳನ್ನು ಜಾಗ್ರತೆ ಭರ್ತಿ ಮಾಡಲು ನಾವು ಪರಿಶೀಲನೆ ಮಾಡುತ್ತೇವೆ

ಶ್ರೀ ಆರ್.ಎನ್. ನಾಯಕ್.—ಅಭ್ಯರ್ಥಿಗಳನ್ನು ಇಂಟರ್‌ವ್ಯೂಗೆ ಯಾವಾಗ ಕರೆಯುತ್ತೀರಿ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ನಾಲ್ಕು ಜಿಲ್ಲೆಗಳಿಗೆ ಸಂಬಂಧಪಟ್ಟಂತೆ ರೆಕ್ರೂಟ್‌ಮೆಂಟ್ ಕಮಿಟಿ ರಚನೆ ಆಗಿದ್ದು ಇಂಟರ್‌ವ್ಯೂ ಸಹ ಆಗಿದೆ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ ಇನ್ನು ಒಂದೆರಡು ತಿಂಗಳುಗಳಲ್ಲಿಯೇ ನಾವು ನಿರ್ಣಯವನ್ನು ಕೈಕೊಳ್ಳುತ್ತೇವೆ.

ಶ್ರೀ ಯು. ಭೂಪತಿ.—ಇದು ಕೇವಲ ನಾಲ್ಕೈದು ಜಿಲ್ಲೆಗಳಿಗೆ ಮಾತ್ರ ಸೀಮಿತವಾಗಿಲ್ಲ. ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿಯೂ ಇದೇ ಪರಿಸ್ಥಿತಿ ಇದೆ. ನಮ್ಮ ಬಳ್ಳಾರಿ ಜಿಲ್ಲೆಯಲ್ಲಿಯೂ ಸಹ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ ಇಂಟರ್‌ವ್ಯೂ ಆಗಿದೆ. ಆದರೆ ಲಕ್ಷೆನ್ ಇನ್ನೂ ಆಗಿಲ್ಲ ಈ ಗ್ರಾಮಲೆಕ್ಕಿಗರು ಎಂದರೆ ಹಳ್ಳಿಗಳಲ್ಲಿ ಡಿ.ಸಿ.ಗಳು ಇದ್ದಂತೆ. ಈಗ ಮಂಡಲ್ ಪಂಚಾಯತಿಗಳು ರಚನೆ ಆಗಿರುವುದರಿಂದ ಇವರ ಕೆಲಸ ಕಡಿಮೆ ಆಗಿದೆ,ಆದ ರಿಂದ ಇವರು ನೋಡಿಕೊಳ್ಳಬೇಕಾದ ಹಳ್ಳಿಗಳ ಸಂಖ್ಯೆ ಯನ್ನು ಜಾಸ್ತಿ ಮಾಡಿದ್ದೇವೆಂದು ಹೇಳಿದರು. ಹಾಗಿದ್ದರೆ ಎಷ್ಟು ಹಳ್ಳಿಗಳನ್ನು ಜಾಸ್ತಿ ಮಾಡಿದ್ದೀರಿ. ಹಳ್ಳಿಗಳ ಸಂಖ್ಯೆಯನ್ನು ಜಾಸ್ತಿ ಮಾಡಿದರೆ, ದೂರದ ಹಳ್ಳಿಗಳಿಂದ ರೈತರು ಸಾಗುವಳಿ ಚೀಟಿ ಅಥವಾ ಬೇರೆ ಸರ್ಟಿಫಿಕೇಟ್‌ಗಳನ್ನು ಪಡೆದುಕೊಳ್ಳಲು ಇವರ ಹತ್ತಿರ ಬರಲು ಕಷ್ಟವಾಗುವುದಿಲ್ಲವೇ ? ಈ ಕಾರಣದಿಂದ ಇವರು ಕೆಲಸ ಮಾಡಬೇಕಾದ ವಿಸ್ತೀರ್ಣವನ್ನು ಸಿ ಕಿಲೋಮೀಟರ್ ಅಥವಾ ೮ ಕಿಲೋ ಮೀಟರ್ ಎಂದು ತಾವಾದರೂ ನಿಗದಿ ಮಾಡಿದ್ದೀರಾ ? ಇದಕ್ಕೆ ಸಂಬಂಧಪಟ್ಟಂತೆ ನಾರಮ್ಸ್ ಅನ್ನು ಏನಾದರೂ ಫಿಕ್ಸ್ ಮಾಡಿದ್ದೀರಾ ?

ಶ್ರೀ ಎಸ್.ಆರ್. ಬೊಮ್ಮಾಯಿ,—ನಾವಮ್ಸ್ ಫಿಕ್ಸ್ ಮಾಡಿದ್ದೇವೆ. ಆದರೆ ಅದರ ವಿವರ ಈಗ ನನ್ನ ಬಳಿ ಇಲ್ಲ. ಮಂಡಲ್ ಪಂಚಾಯತ್‌ಗಳು ರಚನೆ ಆದ ಮೇಲೆ ಇವರ ಕೆಲಸ ಕಡಿಮೆ ಆಗಿದ್ದರಿಂದ ಈಗ ಇವರ ವರ್ಕ್‌ಲೋಡ್‌ನ್ನು ಜಾಸ್ತಿ ಮಾಡಿದ್ದೇವೆ. ಒಂದುವೇಳೆ ಇದರಿಂದ ಅವರಿಗೆ ಕೆಲಸ ಮಾಡುವುದು ಕಷ್ಟವಾದರೆ ಅದನ್ನು ನಾವು ನೋಡುತ್ತೇವೆ.

ಶ್ರೀ ಯು. ಭೂಪತಿ.—ಏರಿಯಾ ಎಷ್ಟು ಜಾಸ್ತಿ ಮಾಡಿದ್ದೀರಿ, ಎಷ್ಟು ಕಿಲೋಮೀಟರ್ ವ್ಯಾಪ್ತಿಯಲ್ಲಿ ಇವರು ಕೆಲಸ ಮಾಡಬೇಕಾಗಿದೆ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಎಸ್.ಆರ್. ಬೊಮ್ಮಾಯಿ.—ಕೆಲವು ನಾರ್ಮ್ಸ್ ಮಾಡಿದ್ದೇವೆ. ಹಳ್ಳಿಗಳು, ಜನಸಂಖ್ಯೆ ಭೂಮಿ, ಇವುಗಳ ಆಧಾರದ ಮೇಲೆ ಮಾಡಿದ್ದೇವೆ.

ಶ್ರೀ ಪೆಟ್.ಕೆ. ಕುಮಾರಸ್ವಾಮಿ.—ಕಂದಾಯ ಇಲಾಖೆಯಲ್ಲಿ ಗ್ರಾಮಲೆಕ್ಕಿಗರ ಸಂದರ್ಶನವಾಗಿದೆ ಹಾಸನ ಜಿಲ್ಲೆಯಲ್ಲಿ ೮೦ ಗ್ರಾಮಲೆಕ್ಕಿಗರ ಹುದ್ದೆಗಳಿವೆ. ೪ ವರ್ಷಗಳಾಯಿತು, ಗ್ರಾಮಲೆಕ್ಕಿಗರ ಸಂದರ್ಶನ ಮಾಡಿಲ್ಲ. ಬೇಲೂರು ತಾಲ್ಲೂಕಿನಲ್ಲಿ ೧೮ ಗ್ರಾಮಲೆಕ್ಕಿಗಳ ಹುದ್ದೆಗಳಿವೆ. ಇದಕ್ಕೆ ಯಾವಾಗ ಸಂದರ್ಶನ ಮಾಡುತ್ತೀರಿ, ಯಾವಾಗ ಈ ಹುದ್ದೆಗಳಿಗೆ ನೇಮಕ ಮಾಡುತ್ತೀರಿ ?

ಶ್ರೀ ಎಸ್.ಆರ್. ಬೊಮ್ಮಾಯಿ.—ಈಗ ಅವಶ್ಯಕತೆ ಇಲ್ಲ, ಅವಶ್ಯಕತೆ ಬಿದ್ದಾಗ ಆಲೋಚನೆ ಮಾಡುತ್ತೇವೆ.

ಶ್ರೀ ಪೆಟ್. ಕೆ. ಕುಮಾರಸ್ವಾಮಿ.—ಅಲ್ಲಿ ಹುದ್ದೆಗಳಿವೆ, ಸಂದರ್ಶನ ಕರೆದು ಕೊಟ್ಟರೆ ನಿರುದ್ಯೋಗಿಗಳಿಗೆ ಅನುಕೂಲವಾಗುತ್ತದೆ.

ಶ್ರೀ ಎಸ್.ಆರ್. ಬೊಮ್ಮಾಯಿ —ಈಗ ಅವಶ್ಯಕತೆ ಇಲ್ಲ. ಆ ಭಾಗದಲ್ಲಿ ಖಾಲಿ ಹುದ್ದೆಗಳು ಹೆಚ್ಚು ಇದೆ ರೆಕ್ರೂಟ್‌ಮೆಂಟ್ ಮಾಡತಕ್ಕಂಥ ಪ್ರಶ್ನೆ ಇಲ್ಲ.

ಮಹಿಳೆಯರ ಉದ್ಯೋಗ ಯೋಜನೆಗಳು

೦೬೪೯. ಶ್ರೀ ಜಿ.ಚಂದ್ರಕಾಂತ ಬೆಲ್ಲದ್ (ಧಾರವಾಡ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸಿಂದರೇ ?

ಅ) ರಾಜ್ಯದಲ್ಲಿ ಮಹಿಳೆಯರ ಕಲ್ಯಾಣದ ಉದ್ಯೋಗ ಯೋಜನೆಗಳ ಸಂಖ್ಯೆ ಎಷ್ಟು ? ಕೇಂದ್ರ ಸರ್ಕಾರದ ಮಹಿಳಾ ಉದ್ಯೋಗದ ಯೋಜನೆಗಳಾವುವು ? (ಪೂರ್ಣ ವಿವರ ಕೊಡುವುದು)

ಆ) ಮಹಿಳೆಯರು ಹೆಚ್ಚು ಸಂಖ್ಯೆಯಲ್ಲಿ ಉದ್ಯೋಗದಲ್ಲಿ ತೊಡಗಿಸಲು ರಾಜ್ಯ ಸರ್ಕಾರದ ವತ್ತು ಕೇಂದ್ರ ಸರ್ಕಾರದ ಸಧ್ಯದ ಯೋಜನೆಗಳು ಯಾವುವು ? (ವಿವರ ಒದಗಿಸುವುದು).

ಇ) ಗ್ರಾಮೋದ್ಯೋಗ ಗುಡಿ ಕೈಗಾರಿಕೆಗಳು ಮಹಿಳೆಯರಿಗೆ ಉದ್ಯೋಗ ನೀಡಿರುವ ರಾಜ್ಯ ಸರ್ಕಾರದ ಮತ್ತು ಕೇಂದ್ರ ಸರ್ಕಾರದ ಪೂರ್ಣ ವಿವರ ನೀಡುವುದು.

ಈ) ಸರ್ಕಾರವು ಮಹಿಳೆಯರ ಕಾರ್ಯಶಕ್ತಿಯನ್ನು ಬಳಸಿಕೊಂಡು ಗೃಹಬಳಕೆಯ ವಸ್ತುಗಳ ಉತ್ಪಾದನೆಯನ್ನು ಹೆಚ್ಚಿಸಿ ಉದ್ಯೋಗ ಒದಗಿಸುವ ಯೋಜನೆಗಳನ್ನೇನಾದರೂ ರೂಪಿಸಿದ್ದೀರಾ ? ಹಾಗಿದ್ದಲ್ಲಿ ಅದರ ವಿವರ ನೀಡುವುದು.

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಮಂತ್ರಿಗಳು).—

ಅ) ಅಂತಹ ನೇರವಾದ ಯೋಜನೆಗಳು ಯಾವುದೂ ಇರುವುದಿಲ್ಲ.

ಆ) ಅನುಬಂದ 'ಅ'ನಲ್ಲಿ ಕೊಡಲಾಗಿದೆ.

ಇ) ನಮ್ಮಲ್ಲಿ ಆ ರೀತಿ ಯೋಜನೆ ಇರುವುದಿಲ್ಲ.

ಈ) ಈಗಾಗಲೇ ಮೇಲೆ (ಅ)ನಲ್ಲಿ ತಿಳಿಸಿರುವಂತೆ ಗೃಹ ಕಲ್ಯಾಣ ಯೋಜನೆಯಲ್ಲಿ ಬ್ಯಾಂಕ್ ಮೂಲಕ ಸಾಲ ಹಾಗೂ ಶೇಕಡ ೨೫ ಸಬ್ಸಿಡಿಯನ್ನು ನೀಡಿ ಅವರು ಗೃಹಬಳಕೆಯ ವಸ್ತುಗಳ ಉತ್ಪಾದನೆ ಮಾಡುವುದರ ಮೂಲಕ ಸ್ವಯಂ ಉದ್ಯೋಗ ಕಲ್ಪಿಸಿದಂತಾಗುತ್ತದೆ.